ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೇ, ತಾಲ್ಲೂಕು ಬೋರ್ಡ್ ಮತ್ತು ಲೋಕಲ್ ಡಿಸ್ಪೆನ್ಸರಿಯನ್ನು ಸರ್ಕಾರ ವಹಿಸಿಕೊಂಡಾಗ ಅದರಲ್ಲಿದ್ದ ನೌಕರರಿಗೆ ಸಂಬಂಧ ಪಟ್ಟ ರೆಕಾರ್ಡ್ಸ್‌ನ್ನು ಡಿವಿಜನಲ್ ಲೆವೆಲ್‌ನಲ್ಲಿ ಪರಿಶೀಲನೆ ಮಾಡಿ ಕಳುಹಿಸಿಕೊಡಬೇಕಾಗುತ್ತದೆ. ಈ ರೀತಿ ನೌಕರರು ಸಾವಿರಾರು ಜನ ಇರುವುದರಿಂದ ಹೀಗೆ ತಡವಾಗಿದೆ. ಆದಷ್ಟು ಬೇಗ ಮಾಡುತ್ತೇವೆ.

ಗೋಕಾಕ್ ತಾಲ್ಲೂಕಿನಲ್ಲಿ ಕ್ರೀಡಾ ಶಾಲೆಯನ್ನು ತೆರೆಯುವುದು.

೧೯೮. ಶ್ರೀ ಎಂ. ಎಲ . ಮುತ್ತಣ್ಣವರ್ (ಗೋಕಾಕ್) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನಸೇವಾ ಹಾಗೂ ಕ್ರೀಡೆಗಳ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ''ಕೊಡಿಗೆ'' ಎಂಬಲ್ಲಿ ತೆರೆಯಲಾದ ಕ್ರೀಡಾ ಶಾಲೆಯನ್ನು ಗೋಕಾಕ್ ತಾಲ್ಲೂಕಿನಲ್ಲಿ, ಇತರ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಆ) ಗೋಕಾಕ್ ತಾಲ್ಲೂಕ್ ಇಲ್ಲಿಯವರೆಗೆ ರಾಜ್ಯಮಟ್ಟದ ಕಬಡ್ಡಿ, ವಾಲಿಬಾಲ್ ಆಟಗಳಲ್ಲಿ ಎಷ್ಟು ಸಲ ಮತ್ತು ಈ ರೀತಿ ಪ್ರಶಸ್ತಿ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಗೆದ್ದ ಟೀಮಿನ ಆಟಗಾರರೆಲ್ಲರೂ ಹಿಂದುಳಿದ ಜನಾಂಗದವರೇ ಇದ್ದು ಸದರೀ ಕ್ರೀಡಾ ಪಟುಗಳಿಗೆ ಸರ್ಕಾರದಿಂದ ಯಾವ ಸೌಲಭ್ಯ ಒದಗಿಸಲಾಗಿದೆ ?

ಶ್ರೀ ಜೀವರಾಜ ಆಳ್ವ (ಮಾನ್ಯ ಕನ್ನಡ ಸಂಸ್ಕೃತಿ ಮತ್ತು ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ಕೊಡಿಗೆಯಲ್ಲಿ ಪ್ರಾರಂಭಿಸಿರುವ ಕ್ರೀಡಾ ಶಾಲೆಯು ಹೆಚ್ಚು ಫಲಪ್ರದವಾಗಿ ಫಲಿತಾಂಶ ನೀಡಿದರೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭಿಸಲು ಪರಿಶೀಲಿಸಬಹುದು.

ಆ) ಗೋಕಾಕ್ ತಾಲ್ಲೂಕಿನ ಕ್ರೀಡಾಪಟುಗಳು ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಇ) ಕ್ರೀಡಾ ಕ್ಷೇತ್ರದಲ್ಲಿ ಸತತ ಅಭ್ಯಾಸ ಮಾಡುವ ಎಲ್ಲಾ ಕ್ರೀಡಾ ಪಟುಗಳಿಗೆ ಸರ್ಕಾರ ಸೌಲಭ್ಯ ಹಾಗೂ ಪ್ರೋತ್ಸಾಹ ನೀಡುತ್ತಾ ಇದೆ. ಈ ಕ್ಷೇತ್ರದಲ್ಲಿ ಹಿಂದುಳಿದವರು ಮುಂದುವರೆದವರು ಎಂಬ ಭೇದ ಮಾಡಲು ಆಗುವುದಿಲ್ಲ.

ಶ್ರೀ ಎಂ. ಎಲ್ ಮುತ್ತಣ್ಣನವರ್.—ಅಧ್ಯಕ್ಷರೇ, ಕೊಡಿಗೆಯಲ್ಲಿ ಇರುವ ಕ್ರೀಡಾ ಶಾಲೆಯು ಹೆಚ್ಚು ಫಲಪ್ರದವಾಗಿದೆ ಹಾಗೂ ಇತರ ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡಾ ಶಾಲೆ ಪ್ರಾರಂಭಿಸುವುದು ಪರಿಶೀಲನೆಯಲ್ಲಿದೆಯೆಂದಿದ್ದರೆ ಈ ಬಾರಿ ಕೊಡಿಗೆ ಕ್ರೀಡಾಶಾಲೆ ಬಂದು ಟ್ರೈಬಲ್ ಏರಿಯಾದಲ್ಲಿದ್ದು ಇಲ್ಲಿನ ಜನ ವಾಲೀಬಾಲ್ ಹಾಗೂ ಇನ್ನಿತರ ಕ್ರೀಡೆಗಳಲ್ಲಿ ರಾಜ್ಯ ಪ್ರಶಸ್ತಿಗಳಿಸಿರುತ್ತಾರೆ. ಗೋಕಾಕ್ ತಾಲ್ಲೂಕಿನಲ್ಲಿ ಕ್ರೀಡಾ ಶಾಲೆಯನ್ನು ತೆಗೆದರೆ ಇಲ್ಲಿನ ಹಿಂದುಳಿದ ಜನರಿಗೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಗೋಕಾಕ್‌ನಲ್ಲಿ ಇನ್ನೊಂದು ಕ್ರೀಡಾ ಶಾಲೆಯನ್ನು ಪ್ರಾರಂಭ ಮಾಡುವ ಬಗ್ಗೆ ಏನು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ ಅದನ್ನು ಸರ್ಕಾರ ಗಮನಿಸುತ್ತದೆ.

ರಾಜ್ಯದಲ್ಲಿನ ವೈದ್ಯಕೀಯ ಕಾಲೇಜುಗಳು

೧೯೯. ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಮೆಡಿಕಲ್ ಕಾಲೇಜುಗಳ ಸಂಖ್ಯೆ ಎಷ್ಟು ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಮಾನ್ಯ ಆರೋಗ್ಯ ಹಾಗೂ ಕುಟುಂಬಕಲ್ಯಾಣ ರಾಜ್ಯಮಂತ್ರಿಗಳು). -

ಅ) ರಾಜ್ಯದಲ್ಲಿ ಒಟ್ಟು ೧೩ ಮೆಡಿಕಲ್ ಕಾಲೇಜುಗಳು ಉಂಟು.

ಶ್ರೀ ಬಿ. ಜಿ. ಬಣಕಾರ್.—ಅಧ್ಯಕ್ಷರೇ, ೯ ಖಾಸಗೀ ಕಾಲೇಜಿನವರು ವಿದ್ಯಾರ್ಥಿಗಳಿಂದ ಹಾಗೂ ಬೇರೆ ರಾಜ್ಯಗಳಿಂದ ಬಂದಂತಹ ವಿದ್ಯಾರ್ಥಿಗಳಿಂದ ಖರ್ಚಿಗಿಂತ ಹೆಚ್ಚು ಹಣವನ್ನು ಕ್ಯಾಪಿಟೇಷನ್ ಮುಖಾಂತರ ವಸೂಲಿ ಮಾಡುತ್ತಿದ್ದು, ಈ ಖಾಸಗೀ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿ ಸರ್ಕಾರವೇ ನಡೆಸಲು ಸಾಧ್ಯವಿಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಸದಸ್ಯರು ಖಾಸಗೀ ಕಾಲೇಜಿನವರು ತಮ್ಮ ಖರ್ಚಿಗಿಂತ ಹೆಚ್ಚಿ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈ ಕಾಲೇಜುಗಳಲ್ಲಿ ವಿದ್ಯಾರ್ಥಿ ಪಡೆಯುತ್ತಿರುವ ಕ್ಯಾಪಿಟೇಷನ್ ಶುಲ್ಕವನ್ನು ಹಂತಹಂತವಾಗಿ ೫ ವರ್ಷಗಳಲ್ಲಿ ರದ್ದು ಮಾಡಬೇಕೆಂದು ಈಗಾಗಲೇ ಈ ವರ್ಷ ಪ್ರವೇಶ ನಿಯಮಾವಳಿಯಲ್ಲಿ ಬದಲಾವಣೆ ಮಾಡಿ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ ಬರತಕ್ಕ ವರ್ಷಗಳಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ನಾವು ರದ್ದು ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಆದರ ಜೊತೆಗೆ ಇವತ್ತು ಖಾಸಗೀ ಕಾಲೇಜಿನವರು ಖರ್ಚಿಗಿಂತ ಹೆಚ್ಚು ಹಣವನ್ನು ಸಂಗ್ರಹ ಮಾಡುವುದಕ್ಕೆ ಈ ವರ್ಷ ಸ್ವಲ್ಪ ಅವಕಾಶ ಉಂಟು ಎನ್ನುವುದನ್ನು ಒಪ್ಪುತ್ತೇನೆ. ಆದರೆ ನಾವು ಒಂದು ನಿಬಂಧನೆ ಹಾಕಿದ್ದೇವೆ. ಎಲ್ಲಾ ಖಾಸಗೀ ಕಾಲೇಜಿನವರು ಅವರದೇ ಆದ ಕ್ಲಿನಿಕಲ್ ಫೆಸಲಿಟೀಸ್ ಇಟ್ಟುಕೊಳ್ಳಬೇಕಾಗುತ್ತದೆ, ಅವರದೇ ಆದರೆ ಆಸ್ಪತ್ರೆಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಅವಕಾಶ ಸಿಕ್ಕಿರಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಹಂತಹಂತವಾಗಿ ಎಂದರೆ ಎಷ್ಟು ವರ್ಷದಲ್ಲಿ ? ೨ ವರ್ಷದಲ್ಲೋ, ೩ ವರ್ಷದಲ್ಲೋ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ೫ ವರ್ಷಗಳೊಳಗೆ ಇದನ್ನು ಕೊನೆಗಾಣಿಸುತ್ತೇವೆಂದು ಹೇಳಿದ್ದೇವೆ.

ಶ್ರೀ ಜೆ. ಡಿ. ಸೋಮಪ್ಪ.—ಗಂಗಾರಾಮ್ ಕಟ್ಟಡದ ಹಾಗೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಅದಕ್ಕೂ ಇದಕ್ಕೂ ಏಕೆ ಸಮ್ಮನೆ ಸಂಬಂಧ ಕಲ್ಪಿಸುತ್ತೀರಿ ? ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೀವೇ ತಯಾರು ಮಾಡಿದ ಶಿಶುಸಂತಾನ ಇದು. ನೀವು ಏಕೆ ಮಾತನಾಡುತ್ತೀರಿ ?

ಶ್ರೀ ಸಿ. ಭೈರೇಗೌಡ.—ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವ ನಿಬಂಧನೆ ಮಣಿಪಾಲದಲ್ಲಿರುವ ಕಸ್ತೂರಿಬಾ ಮೆಡಿಕಲ್ ಕಾಲೇಜಿಗೆ ಅನ್ವಯಿಸುತ್ತದೆಯೇ ? ಹಾಗೂ ಮಂಗಳೂರಿನಲ್ಲಿ ಇರುವ ಮಣಿಪಾಲದ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಅಂಗಸಂಸ್ಥೆ ಕಾಲೇಜಿಗೂ ಇದು ಅನ್ವಯಿಸುತ್ತದೆಯೇ ? ಅನ್ವಯಿಸದಿದ್ದರೆ, ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಯಾವ ಯಾವ ಖಾಸಗೀ ಕಾಲೇಜಿನವರು ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದಾರೋ ಅಂತಹ ಕಾಲೇಜುಗಳಿಗೆ ಈ ಒಂದು ಕಾನೂನು ಅನ್ವಯಿಸುತ್ತದೆ ಮಣಿಪಾಲ ಕಾಲೇಜಿನವರು ಕ್ಯಾಪಿಟೇಷನ್ ಶುಲ್ಕ ಪಡೆಯುತ್ತಿಲ್ಲವೆಂದು ಹೇಳಿದ್ದು ಅವರದೇ ಆಸ್ಪತ್ರೆಯನ್ನು ಇಟ್ಟುಕೊಂಡಿದ್ದಾರೆ. ಆದರೂ ಅವರು ಕ್ಯಾಪಿಟೇಷನ್ ಶುಲ್ಕ ಪಡೆದಿದ್ದರೆ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಹಾಗೂ ಮಂಗಳೂರಿನಲ್ಲಿರುವ ಈ ಕಾಲೇಜಿನ ಅಂಗಸಂಸ್ಥೆಯ ಬಗ್ಗೆ ಹೇಳುವುದಾದರೆ ಅಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಸರ್ಕಾರ ಅದಕ್ಕೆ ಅನುಮತಿ ಕೊಟ್ಟಿದೆ.

ಶ್ರೀ ಡಾ. ಸಂಗಮೇಶ್ವರ ಸರ್ದಾರ್.—ಕ್ಯಾಪಿಟೇಷನ್ ರೂಪದಲ್ಲಿ ತೆಗೆದುಕೊಳ್ಳದೇ ಡೊನೇಷನ್ ರೂಪದಲ್ಲಿ ತೆಗೆದುಕೊಂಡರೆ ಏನು ಮಾಡುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದೇವೆ. ಡೊನೇಷನ್ ರೂಪದಲ್ಲಿ ಯಾವುದೇ ಕಾಲೇಜಿನಲ್ಲಿ ಹಣ ಪಡೆದಿರುವ ನಿರ್ದಿಷ್ಟ ದೂರಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಡಾ. ಎಚ್. ಎಲ್. ತಿಮ್ಮೇಗೌಡ —ಸೆಂಟ್ ಜಾನ್ ಮೆಡಿಕಲ್ ಕಾಲೇಜು ಹಾಗೂ ವಂಣಿಪಾಲದ ಕಸ್ತೂರಿಬಾ ಕಾಲೇಜಿನಲ್ಲಿ ಸರ್ಕಾರದ ಕೋಟಾ ಏನು ೧೫ ಪರ್ಸೆಂಟ್ ಎಂದು ಇದೆ, ಅಂತಹ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವರು ಒಪ್ಪಿಗೆ ಕೊಡುತ್ತಿಲ್ಲವೆಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೇ, ಮೊದಲನೆಯದಾಗಿ ಮಣಿಪಾಲ್ ಮೆಡಿಕಲ್ ಕಾಲೇಜು ಮತ್ತು ಸೆಂಟ್‌ಜಾನ್ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರದಿಂದ ೧೫ ಪರ್ಸೆಂಟ್ ಜನರನ್ನು ತೆಗೆದುಕೊಳ್ಳಬೇಕೆಂದು ಕಳುಹಿಸಿಕೊಟ್ಟಿಲ್ಲ. ಆದುದರಿಂದ ೨ನೇ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರೇ ಕ್ಲಿನಿಕಲ್ ಫೆಸಲಿಟಿ ಇಟ್ಟುಕೊಂಡಿರುವುದರಿಂದ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವ ವಿಷಯ ಉದ್ಭವವಾಗುವುದಿಲ್ಲ. ನಮ್ಮ ಸರ್ಕಾರಿ ಕೋಟಾದ ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿಲ್ಲ.

ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಜಾರಿಗೊಳಿಸುವುದು

೨೩೩. ಶ್ರೀ ಪಿ. ರಾಂದೇವ್ (ಮುಲ್ಲೇಶ್ವರಂ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಯುವಜನ ಸೇವೆಗಳ ಹಾಗೂ ಕ್ರೀಡಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡವನ್ನು ಆಡಳಿತ ಭಾಷೆಯಾಗಿ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಮ್ಮಿಕೊಂಡಿರುವ ಯೋಜನೆಗಳಾವುವು ?

ಆ) ಈ ಯೋಜನೆಗಳನ್ನು ಪೂರೈಸಲು ಎಷ್ಟು ಕಾಲ ಬೇಕಾಗುತ್ತದೆ ?

ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದಂತೆ, ನೇಮಕಾತಿ ಸಮಿತಿ ರಚನೆಯಾಗಿದೆಯೇ ? ಹಾಗಿದ್ದಲ್ಲಿ ಈ ಇಲಾಖೆಗೆ ಅಗತ್ಯವಾಗಿರುವ ಸಿಬ್ಬಂದಿಯನ್ನು ಶೀಘ್ರವಾಗಿ ನೇಮಕ ಮಾಡಲಾಗುವುದೇ ?

ಶ್ರೀ ಜೀವರಾಜ ಆಳ್ವ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಗೆಜೆಟೆಡ್ ಅಧಿಕಾರಿಗಳಿಗೆ, ನಾನ್ ಗೆಜೆಟೆಡ್ ಅಧಿಕಾರಿಗಳಿಗೆ, ನ್ಯಾಯಾಂಗ ಇಲಾಖೆಯ ಅಧಿಕಾರಿಗಳಿಗೆ, ಹಾಗೂ ಪ್ರಾಸಿಕ್ಯೂಷನ್ ಇಲಾಖೆಯ ಅಧಿಕಾರಿಗಳಿಗೆ, ನ್ಯಾಯಾಂಗ ಇಲಾಖೆಯ ನೌಕರರಿಗೆ, ಸಚಿವಾಲಯದ ಗೆಜೆಟೆಡ್ ಅಧಿಕಾರಿಗಳಿಗೆ ಕನ್ನಡೇತರರಿಗೆ ಕನ್ನಡ ತರಬೇತಿ, ಹಾಗೂ ಕನ್ನಡ ಬೆರಳಚ್ಚು, ಶೀಘ್ರಲಿಪಿಗಾರರ ತರಗತಿಗಳನ್ನು, ವಿಚಾರ ಸಂಕೀರ್ಣಗಳನ್ನು ಏರ್ಪಡಿಸುವುದು, ನಿರುದ್ಯೋಗ ಬೆರಳಚ್ಚುಗಾರರಿಗೆ ಜಾಬ್ ಟೈಪಿಂಗ್ ಮಾಡಲು ಧನಸಹಾಯ, ನೆರೆರಾಜ್ಯದ ವಿವಿಧ ಬಿ.ವಿ.ಗಳಲ್ಲಿ ಎಂ.ಎ.ಎಂ ಫಿಲ್. ಹಾಗೂ ಕನ್ನಡದಲ್ಲಿ ಪರಿಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಗೊಳಿಸಲು ಪೂರಕವಾದ ಸಾಹಿತ್ಯ ರಚನೆ ಹಾಗೂ ಪ್ರಕಟಣೆ, ಬಹುಮಾನ, ಆಡಳಿತ ಸಾಹಿತ್ಯ ಪೂರೈಕೆ, ಇಲಾಖೆಯ ತ್ರೈಮಾಸಿಕ ವಾರ್ತಾ ಪತ್ರಿಕೆಯ ಪ್ರಕಟಣೆ, ಲೇಖಕರಿಗೆ ಧನಸಹಾಯ, ಇಲಾಖಾವಾರು ಪಾರಿಭಾಷಿಕ ಶಬ್ದಕೋಶಗಳ ಪರಿಷ್ಕರಣ ಕಾನೂನು, ಪದವಿವರಣಾಕೋಶದ ರಚನೆ, ಕಾನೂನು ಪುಸ್ತಕಗಳ ಭಾಷಾಂತರ, ಇಲಾಖಾ ಪಾರಿಭಾಷಿಕ ಶಬ್ದಕೋಶಗಳನ್ನು ಸಿದ್ಧಪಡಿಸುವುದು, ೧೮ ಜಿಲ್ಲಾ ವಿಷಯಕೋಶಗಳ ಭಾಷಾಂತರ, ಕೆ.ಸಿ.ಆರ್.ಎಸ್.ಆರ್., ಕೆ.ಎಫ್.ಸಿ. ಕೆ.ಟಿ.ಸಿ.ಯ ಪರಿಷ್ಕರಣ, ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ಶಬ್ದಕೋಶದ ಸಿದ್ಧತೆ, ಪ್ರಾದೇಶಿಕ ಭಾಷಾ ಪ್ರಭೇದ ನಿಘಂಟು ರಚನೆ, ಆಯಾ ಇಲಾಖೆಗಳ ಕನ್ನಡ ಕೈಪಿಡಿಗಳನ್ನು ಸಿದ್ಧಪಡಿಸುವುದು. ಹೊಸ ಇಲಾಖಾ ಪಾರಿಭಾಷಿಕ ಶಬ್ದಕೋಶ